ದಿನಾಂಕ 01.07.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ Sri. A.R.K. ವಕೀಲರಿಂದ:**

ನಿಮ್ಮ ತಾತನ ಅಪ್ಪನ ಹೆಸರು ಸಿದ್ದ ಎಂದರೆ ಸರಿ . ಪ್ರತಿವಾದಿಯವರ ತಾತನ ಹೆಸರು ಭೈರಲಿಂಗಯ್ಯ ಎಂದರೆ ಗೊತ್ತಿಲ್ಲ. ನೀವು ಹಾರೋಹಳ್ಳಿ ಯಲ್ಲಿ ಹುಟ್ಟಿ ಬೆಳೆದಿರುತ್ತೀರಿ ಎಂದರೆ ಸರಿ . ನಿಮ್ಮ ಕುಟುಂಬದ ಮೂಲ ಪುರುಷ ಹಾಗೂ ಪ್ರತಿವಾದಿ ಕುಟುಂಬದ ಮೂಲ ಪುರುಷ ಸಿದ್ದಯ್ಯ ಎಂದರೆ ಸರಿಯಲ್ಲ , ನಮ್ಮ ಕುಟುಂಬದ ಮೂಲ ಪುರುಷ ಸಿದ್ದ ಎಂದು ನುಡಿಯುತ್ತಾರೆ. ಪ್ರತಿವಾದಿಯ ಮುತ್ತಾತನ ಹೆಸರು ಕೂಡ ಸಿದ್ದ ಎಂದರೆ ಗೊತ್ತಿಲ್ಲ . ನಿಮ್ಮ ಕುಟುಂಬ ಹಾಗೂ ಪ್ರತಿವಾದಿಯಕುಟುಂಬ ಒಂದೇ ಬೀದಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ವಯಸ್ಸು 66. ಪ್ರತಿವಾದಿ ಮರಿಯಪ್ಪನ ತಂದೆ ಗುರುಸಿದ್ದಯ್ಯ ನನ್ನು ನೋಡಿರುತ್ತೀರಿ ಎಂದರೆ ಸರಿ . ನಿಮ್ಮ ಹಾಗೂ ಪ್ರತಿವಾದಿ ಕುಟುಂಬದ ಹೆಸರುಗಳನ್ನು ಸಾಮಾನ್ಯವಾಗಿ ಸಿದ್ದ , ಭೈರಲಿಂಗ ಎಂದು ಇಟ್ಟಿರುತ್ತಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯವರಿಗೆ 7 ಜನ ಅಣ್ಣ ತಮ್ಮಂದಿರು. ನೀವು ಮತ್ತು ನಿಮ್ಮ ತಂದೆಯ ಅಣ್ಣ ತಮ್ಮಂದಿರು ನಿಮ್ಮ ಕುಟುಂಬದ ಆಸ್ತಿಯನ್ನು ಭಾಗ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. 3 ಸ್ವತ್ತಿನ ಸರ್ವೆ ನಂ. 21/22, ಮಾರಸಂದ್ರದ ಸರ್ವೆ ನಂ. 5 ಮತ್ತು 6 , ಹಾರೋಹಳ್ಳಿ ಯ ಸರ್ವ ನಂ. 10 ಮತ್ತು 11 ಆಗಿರುತ್ತದೆ. ಸದರಿ ಜಮೀನುಗಳನ್ನು ನಿಮ್ಮ ತಂದೆ ಹಾಗೂ ಅವರ

ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾಡಿರಬಹುದು ಎಂದು ನುಡಿಯುತ್ತಾರೆ. ಸದರಿ ಜಮೀನುಗಳ ಪೈಕಿ ಕೆಲವು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಹೌದು ಎಂದು ನುಡಿಯುತ್ತಾರೆ. ವಿಭಾಗ ಪತ್ರದಲ್ಲಿ ಈ ದಾವಾ ಸ್ವತ್ತನ್ನು ತೋರಿಸಿಲ್ಲ ಎಂದರೆ ಸರಿ . ನಿಮ್ಮ ತಂದೆ ಯ ಅಣ್ಣ ತಮ್ಮದಿರು ಯಾವ ವರ್ಷದಲ್ಲಿ ಜಮೀನನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನೆನಪಿಲ್ಲ ಎಂದು ನುಡಿಯುತ್ತಾರೆ. ಮೂಲ ಸರ್ವೆ ನಂ. 21/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 31 ಗುಂಟೆ ಇತ್ತು ಎಂದರೆ ಸಾಕ್ಷಿದಾರರು 5 ಎಕರೆ ಇತ್ತು ಎಂದು ನುಡಿಯುತ್ತಾರೆ. ಸದರಿ 5 ಎಕರೆ ಖಾತೆ ನಮ್ಮ ತಾತನ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ.

1936-37 ರ ಸಾಲಿನ ಪಹಣಿ ಯ ಪ್ರಕಾರ 5 ಎಕರೆ ಚಿಲ್ಲರೆ ಇತ್ತು ಎಂದು ನುಡಿಯುತ್ತಾರೆ. ಸರ್ವೆ ನಂ. 21/1 ರಲ್ಲಿ 4 ಎಕರೆ 31 ಗುಂಟೆ ಪ್ರತಿವಾದಿಯ ತಾತ ಭೈರಲಿಂಗ ಬಿನ್ ಸಿದ್ದ ರವರ ಹೆಸರಿನಲ್ಲಿ ಪಹಣಿ ಇತ್ತು ಎಂದರೆ ಸಾಕ್ಷಿದಾರರು ಸರಿಯಲ್ಲ , ಭೈರಲಿಂಗ ಬಿನ್ ಸಿದ್ದ ನಮ್ಮ ತಾತ ಎಂದು ನುಡಿಯುತ್ತಾರೆ. ನೀವು ತಹಶೀಲ್ದಾರ್ ಮುಂದೆ ಹಾಜರುಪಡಿಸಿರುವ ವಂಶವೃಕ್ಷಕ್ಕೂ , ರೆವಿನ್ಯೂ ದಾಖಲೆಗಳಿಗೂ ತಾಳೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 21/1 ರ ಪಹಣಿಯಲ್ಲಿ ಅನುಭೋಗದ ಕಾಲಂ ನಲ್ಲಿ ಪಿಳ್ಳಮ್ಮ ಉ. ನಿಂಗಮ್ಮ ಎಂದು ಇದೆ ಎಂದರೆ ಮೊದಲು ಇತ್ತು ಎಂದು ಸಾಕ್ಷಿದಾರರು ನುಡಿಯುತ್ತಾರೆ. ದಿನಾಂಕ 15.11.1997 ರಲ್ಲಿ ಮರಿಯಪ್ಪನ ತಾತ ಭೈರಲಿಂಗಯ್ಯ ರವರ ಹೆಸರಿಗೆ Restore ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪೈಕಿ 13 ಗುಂಟೆ ಜಮೀನನ್ನು ಎನ್. ಜಿ. ಇನಾಯತ್ ರವರಿಗೆ ಪ್ರತಿವಾದಿಗಳು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ, ನಾವು ಮಾರಾಟ ಮಾಡಿರುವುದಾಗಿ ನುಡಿಯುತ್ತಾರೆ. ಮಾರಾಟ

ಮಾಡಿದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇಲ್ಲ. ಉಳಿದ 2 ಎಕರೆ ಸ್ವತ್ತು ಪ್ರತಿವಾದಿಯ ತಾತ ಭೈರಲಿಂಗಯ್ಯ ರವರ ಹೆಸರಿಗೆ ಉಳಿದುಕೊಂಡಿರುತ್ತದೆ ಎಂದರೆ ಸರಿ . ವೈರಮುಡಯ್ಯ , ಬೋರಯ್ಯ , ಸಿದ್ದಲಿಂಗಯ್ಯ ರವರು ನಿಮ್ಮ ದಾಯಾದಿಗಳು ಎಂದರೆ ಸರಿ . ಸದರಿಯವರು ಸರ್ವೆ ನಂ. 21/1 ರಲ್ಲಿ 1 ಎಕರೆ ಜಮೀನನ್ನು ಕುಳ್ಳಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಕುಳ್ಳಪ್ಪರವರು ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ಸರಿ . ಸರ್ವೆ ನಂ. 21/1 ರಲ್ಲಿ 2 ಎಕರೆ 38 ಗುಂಟೆ ಜಮೀನಿನಲ್ಲಿ ಪ್ರತಿವಾದಿಯೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಿದ್ದಯ್ಯ, ಸಣ್ಣ ಬೋರಯ್ಯ , ಚಲುವಯ್ಯ , ಬೋರಯ್ಯ ಉ. ಕೃಷ್ಣಯ್ಯ , ರೇವಯ್ಯ , ಮತ್ತು ಸಣ್ಣಯ್ಯ ನಿಮ್ಮ ಚಿಕ್ಕಪ್ಪಂದಿರು ಎಂದರೆ ಸರಿ . ನನ್ನ ತಂದೆಯ ಹೆಸರು ವೈರಮುಡಯ್ಯ.

ದಿನಾಂಕ 16.02.1996 ರಲ್ಲಿ ನೀವು ಮತ್ತು ನಿಮ್ಮ ಚಿಕ್ಕಪ್ಪಂದಿರು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಪ್ರಕಾರ ಸರ್ವೆ ನಂ. 21/1 ರಲ್ಲಿ 13 ಗುಂಟೆ ಜಮೀನು ಸಣ್ಣಬೋರಯ್ಯ , ಬೋರಯ್ಯ ಉ. ಕೃಷ್ಣಯ್ಯ ರವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ . ಸದರಿ ವಿಭಾಗ ಪತ್ರದ ಚಕ್ಕುಬಂಧಿಯಲ್ಲಿ ದಕ್ಷಿಣಕ್ಕೆ ಮರಿಯಪ್ಪನ ಜಮೀನು ಎಂದು ಬರೆಸಲಾಗಿದೆ ಎಂದರೆ ಸರಿಯಲ್ಲ, ದಕ್ಷಿಣಕ್ಕೆ ರಸ್ತೆ ಇದೆ ಎಂದು ನುಡಿಯುತ್ತಾರೆ. ಮರಿಯಪ್ಪ , ಪ್ರತಿವಾದಿ ಎಂದರೆ ಸರಿ . ಸರ್ವೆ ನಂ. 28 ನಿಮ್ಮ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಸರ್ವೆ ನಂ. 28 ಮರಿಯಪ್ಪನಿಗೆ ಸೇರಿದ ಜಮೀನು ಎಂದರೆ ಸರಿ .

ದಿನಾಂಕ 07.08.2006 ರಲ್ಲಿ ಪತಿವಾದಿ ಮರಿಯಪ್ಪ ರವರು ಅವರ ಹೆಂಡತಿ ಬಸಮ್ಮ ಉ. ಲಕ್ಷ್ಮಮ್ಮ ಮತ್ತು ಮಗ ಸಿದ್ದರಾಜು ರವರಿಗೆ ದಾನಪತ್ರವನ್ನು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾನಪತ್ರದ ಪ್ರಕಾರ ಖಾತೆ ಪಹಣಿ ಬಂದಿರುತ್ತದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ. 21/1 ರಲ್ಲಿ 26 ಗುಂಟೆ ಜಮೀನು ಹಾರಿಪ್ ಪಾಷ ಮತ್ತು ಇತರರು ಸೇರಿ ಸಬ್ದರ್ ಹುಸೇನ್ ರವರಿಗೆ 05.12.2014 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ಚಕ್ಕುಬಂಧಿಯಲ್ಲಿ ಪೂರ್ವಕ್ಕೆ ಮತ್ತು ಉತ್ತರಕ್ಕೆ ಮರಿಯಪ್ಪ ರವರ ಜಮೀನು ಎಂದು ತೋರಿಲಸಾಗಿದೆ ಎಂದು ಸಾಕ್ಷಿದಾರರು ತಪ್ಪು ತೋರಿಸಲಾಗಿದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಭೂ ಪರಿವರ್ತನೆ ಆಗಿದೆ ಎಂದರೆ ಸಾಕ್ಷಿದಾರರು ಸರಿಯಲ್ಲ ಎಂದು ನುಡಿಯುತ್ತಾರೆ. ಭೂ ಪರಿವರ್ತನೆ ಆದ ನಂತರ ಪಂಚಾಯಿತಿ ಯಿಂದ ನಮೂನೆ 9 ಅನ್ನು ಪಡೆದಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ದಾಖಲೆಯ ಚಕ್ಕುಬಂದಿಯಲ್ಲಿ ಪೂರ್ವಕ್ಕೆ ಮರಿಯಪ್ಪನ ಜಮೀನು ಎಂದು ಇದೆ ಎಂದರೆ ಚಕ್ಕುಬಂದಿ ತಪ್ಪಾಗಿ ತೋರಿಸಲಾಗಿದೆ ಎಂದು ನುಡಿಯುತ್ತಾರೆ. ಕೃಷ್ಣಯ್ಯ ನವರ ಕುಟುಂಬ ಚಿಕ್ಕತಾಯಮ್ಮ ಮತ್ತು ಇತರರು ಪ್ರತಿವಾದಿಯ ಮಗನಿಗೆ 30.09.2010 ರಲ್ಲಿ ಸರ್ವೆ ನಂಬರ್ 28ರ ಸಂಬಂಧ ಕ್ರಯದ ಕರಾರು ಪತ್ರವನ್ನು ಮಾಡಿರುತ್ತಾರೆ ಎಂದರೆ ಇರಬಹುದು. ಸದರಿ ಪತ್ರದಲ್ಲೂ ಸಹ ಪಶ್ಚಿಮಕ್ಕೆ ಮರಿಯಪ್ಪ ಎಂದು ತೋರಿಸಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದವರೇ ದಾವಾ ಸ್ವತ್ತಿನಲ್ಲಿ ಮರಿಯಪ್ಪನವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪಡ ಯಾರ ಹೆಸರಿನಲ್ಲಿ ಮರಳಿ ಆಗಿತ್ತು ಸಿದ್ದ ನವರ ಹೆಸರಿನಲ್ಲಿ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ಕಾರಕ್ಕೆ ಅಂದಾಜು 5 ರಿಂದ 6 ಸಾವಿರ ಹಣವನ್ನು ಕಟ್ಟಿರುತ್ತೇನೆ.

ನಿಪಿ-8 ಪ್ರತಿವಾದಿಯ ತಾತ ಭೈರಲಿಂಗಯ್ಯ ನವರ ಹೆಸರಿನಲ್ಲಿ Restore ಆಗಿತ್ತು ಎಂದರೆ ಸರಿ. ಹಣ ಕಟ್ಟಿರುವ ಚಲನ್ ಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ